# ಹತ್ತನೇ ತರಗತಿ ಸಮಾಜ ವಿಜ್ಞಾನ ಮಾದರಿ ಪ್ರಶ್ನಾ ಪತ್ರಿಕೆ -4

ಅ.ಈ ಕೆಳಗಿನ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಸೂಕ್ತವಾದುದನ್ನು ಆರಿಸಿ ಕ್ರಮಾಕ್ಷರದೊಂದಿಗೆ ಕೊಟ್ಟಿರುವ ಜಾಗದಲ್ಲಿ ಉತ್ತರಿಸಿರಿ.

1. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು____________
   A. ರಾಬರ್ಟ್ ಕ್ಲೈವ್
   B. ಲಾರ್ಡ್ ವೆಲ್ಲೆಸ್ಲಿ
   C. ವಾರನ್ ಹೇಸ್ಟಿಂಗ್ಸ್
   D. ಡಾಲ್ ಹೌಸಿ
2. ಎ" ಪಟ್ಟಿಯಲ್ಲಿ ನಾಯಕರು  ಮತ್ತು "ಬಿ" ಪಟ್ಟಿಯಲ್ಲಿ ಅವರ ಕಾರ್ಯವನ್ನು ಸೂಚಿಸಲಾಗಿದೆ. ಇವುಗಳು ಸರಿ ಹೊಂದುವ ಉತ್ತರದ ಗುಂಪು

| | |
|---|---|
| 1) ಷೇಕ್ ಅಬ್ದುಲ್ಲ | ಎ)ಆಂಧ್ರ ಮಹಾ ಸಭಾ |
| 2) ವಲ್ಲಭಾ ಬಾಯಿ ಪಟೇಲ್ | ಬಿ)ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ರಚನೆ |
| 3) ಫಝಲ್ ಆಲಿ | ಸಿ)ದೇಶೀಯ ಸಂಸ್ಥಾನಗಳ ವಿಲೀನೀಕರಣ |
| 4) ಪೊಟ್ಟಿ ಶ್ರೀ ರಾಮುಲು | ಡಿ)ಭಾಷಾವಾರು ರಾಜ್ಯಗಳ ರಚನೆ |

3.ಸಾರ್ಕ್ ಸ್ಥಾಪನೆಯಾದ ವರ್ಷ ________

A. 1985
B. 1975
C. 1965
D. 1955

4. 1966ರ ತಾಷ್ಕೆಂಟ್ ಒಪ್ಪಂದವು ರಷ್ಯ ಸಹಕಾರದೊಂದಿಗೆ ಈ ದೇಶಗಳ ನಡುವೆ ನಡೆಯಿತು_______
   A. ಭಾರತ-ಶ್ರೀಲಂಕಾ
   B. ಭಾರತ-ಪಾಕಿಸ್ತಾನ
   C. ಭಾರತ-ಭೂತಾನ್
   D. ಭಾರತ-ಅಮೇರಿಕಾ

5.ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಕರ್ನಾಟಕ ರಾಜ್ಯ ಸರ್ವ ಶಿಕ್ಷಾ ಅಭಿಯಾನದ ಮೂಲಕ ಜಾರಿ ಮಾಡಿದ ಕಾರ್ಯಕ್ರಮ______

A. ಬಾ ಮರಳಿ ಶಾಲೆಗೆ
B. ಸಮುದಾಯದತ್ತ ಶಾಲೆ
C. ಕೂಲಿಯಿಂದ ಶಾಲೆಗೆ
D. ಚಿಣ್ಣರ ಅಂಗಳ

6.ಹಿರಾಕುಡ್ ಯೋಜನೆಯನ್ನು  ಈ ನದಿಗೆ ನಿರ್ಮಿಸಲಾಗಿದೆ________

A. ಕೃಷ್ಣಾ
B. ಕೋಸೀ
C. ಸಟ್ಲೇಜ್
D. ಮಹಾನದಿ

7.ಒಂದು ವರ್ಷದಲ್ಲಿ ವ್ಯವಸಾಯ ಕ್ಷೇತ್ರದಿಂದ ಎರಡು ಮೂರು ಬೆಳೆಗಳನ್ನು ಬೆಳೆಯುದಕ್ಕೆ ________ಎಂದು ಕರೆಯುವರು.

A. ಜೀವನಾಧಾರ ಬೇಸಾಯ
B. ಮಿಶ್ರ ಬೇಸಾಯ
C. ಸಾಂದ್ರ ಬೇಸಾಯ
D. ವಾಣಿಜ್ಯ ಬೇಸಾಯ

8.ಸ್ವಾತಂತ್ರ್ಯ ಪೂರ್ವದ ಭಾರತವು ________ರಾಷ್ಟ್ರಕ್ಕೆ ಉದಾಹರಣೆಯಾಗಿದೆ.

A. ಅಭಿವೃಧ್ಧಿ
B. ಅನಾಭಿವೃಧ್ಧಿ
C. ಅಭಿವೃಧ್ಧಿ ಶೀಲ
D. ಅಭಿವೃಧ್ಧಿ ಹೊಂದುತ್ತಿರುವ

9.ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ________-ಇಲಾಖೆ ನೀಡುತ್ತದೆ.

A. ಶಿಕ್ಷಣ
B. ಸಾರಿಗೆ
C. ಅಂಚೆ
D. ಹಣಕಾಸು

10.ಬಿಳಿಕ್ರಾಂತಿಯ ಪಿತಾಮಹ ಎಂದು ಪ್ರಖ್ಯಾತರಾದವರು________-

A. ಧೀರೂಬಾಯಿ ಅಂಬಾನಿ
B. ಅಜೀಂ ಜಿ ಪ್ರೇಂ ಜಿ
C. ವರ್ಗೀಸ್ ಕುರಿಯನ್
D. ಕಿರಣ್ ಮುಜುಂದಾರ್ ಶಾ

ಆ. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1) ಬಳ್ಳಾರಿ ಜಿಲ್ಲೆಯಲ್ಲಿ ಜನಸಾಮಾನ್ಯರಲ್ಲಿ ಕೃಷ್ಣದೇವರಾಯನಿಗಿಂತ ಕುಮಾರರಾಮ ಜನಜನಿತ ಏಕೆ?
2) ಜುನಾಘಡ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಯಾವ ಕಾರಣದಿಂದ ಸೇರಲಿಲ್ಲ?
3) ಅಮೇರಿಕಾವು ಯಾವ ಘಟನೆಯಿಂದಾಗಿ ಒಂದನೇ ಮಹಾಯುಧ್ಧದಲ್ಲಿ ಭಾಗವಹಿಸಿತು?
4) ಕರ್ನಾಟಕದಲ್ಲಿ ಬ್ರಷ್ಟಾಚಾರ ನಿಯಂತ್ರಿಸಲು ಅಸ್ತಿತ್ವದಲ್ಲಿರುವ ಸಂಸ್ಥೆ ಯಾವುದು?
5) ಶಸ್ತ್ರಾಸ್ತ್ರ ಪೈಪೋಟಿಯಿಂದ ಹೊರಬರಲು ಇರುವ ಪ್ರಮುಖ ಕಾರಣ ಇದಾಗಿದೆ?
6) ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು?
7) 1994ರಲ್ಲಿ ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿಭಂಧಕ ಕಾಯ್ದೆ ಜಾರಿಗೊಳಿಸಲು ಕಾರಣವೇನು?
8) ಮಾನ್ಸೂನ್ ಮಾರುತ ಎಂದರೇನು?
9) ಸುವರ್ಣ ಕ್ರಾಂತಿ ಎಂದರೇನು?
10) ಅಸಂಪ್ರದಾಯಿಕ ಶಕ್ತಿ ಮೂಲಗಳನ್ನು ಹೆಸರಿಸಿ
11) ಉತ್ತರ ಪ್ರದೇಶದ ಗೊರಖ್ ಪುರ ಪ್ರದೇಶವನ್ನು ಭಾರತದ ಜಾವ ಎಂದು ಕರೆಯಲು ಕಾರಣವೇನು?
12) ಎಚ್. ಡಿ. ಐ ಇದನ್ನು ವಿಸ್ತರಿಸಿರಿ.
13) ಕೊರತೆಯ ಆಯವ್ಯಯ ಅರ್ಥ ಬರೆಯಿರಿ.
14) ಉದ್ಯಮಿ ಎಂದರೇನು?

ಇ.ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ.

1) ಪ್ಲಾಸೀ ಕದನದ ಫಲಿತಾಂಶವನ್ನು ಬರೆಯಿರಿ
2) ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು?
3) ಆ್ಯನಿಬೆಸೆಂಟರ ಸುಧಾರಣೆಗಳಾವುವು?
4) ಚೀನಾ ಕ್ರಾಂತಿಯ ಯಾವುದಾದರು ಎರಡು ಪ್ರಮುಖ ಪರಿಣಾಮಗಳನ್ನು ಬರೆಯಿರಿ.
5) ಮಹಿಳೆಯರ ಸ್ಥಾನಮಾನವನ್ನು ಉತ್ತಮ ಪಡಿಸಲು ನಿಮ್ಮ ಸಲಹೆ ಏನು?
6) ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಲ ನಾಲ್ಕು ಹೆಸರನ್ನು ಬರೆಯಿರಿ.
7) ಪರಿಸರ ಮಾಲಿನ್ಯದ ಸ್ವರೂಪವನ್ನು ಬರೆಯಿರಿ.
8) ಶಿವಾಲಿಕ್ ಶ್ರೇಣಿಯ ಕುರಿತು ಬರೆಯಿರಿ
9) ಹಿಮಾಲಯ ಪರ್ವತದಲ್ಲಿ ಕಂಡು ಬರುವ ಮಣ್ಣಿನ ಪ್ರಕಾರಗಳಾವುವು?
10) ಜೈವಿಕ ವೈವಿಧ್ಯತೆ ಎಂದರೇನು?
11) ಜಿ.ಐ.ಎಸ್ ಎಂದರೇನು?
12) ಪ್ರವಾಹಗಳೆಂದರೇನು?
13) ಜನಸಾಂಧ್ರತೆ ಎಂದರೇನು?
14) ಜಾಗತೀಕರಣದ ಬಗ್ಗೆ ಬರೆಯಿರಿ.
15) ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳೇನು?